# ಮನಸೆಳೆಯುವ ಕಿರುನಗೆ

ಸ್ವಾಮಿ ರಾಘವೇಶಾನಂದ

**ಭ**ಗವಾನ್ ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿ ನಮ್ಮ ಮನಸೆಳೆಯುವಂಥ ಅಂಶಗಳು ಒಂದೇ, ಎರಡೇ? ಅವರ ದಿವ್ಯ ಮಂಗಳ ರೂಪ, ಕರುಣೆ ಸೂಸುವ ಕಣ್ಣುಗಳು, ಅಭಯವೀಯುವ ಕರಗಳು, ಆಶ್ರಯ ನೀಡುವ ಪದಕಮಲಗಳು, ಮನಶ್ಶಾಂತಿಯನ್ನೂ ಆನಂದವನ್ನೂ ನೀಡುವ ಅವರ ಅಮೃತವಾಣಿ – ಹೀಗೆ ಅನೇಕ ರೀತಿಯಲ್ಲಿ ನಮ್ಮನ್ನು ಆಕರ್ಷಿಸುವಂಥದ್ದು ಅವರ ವ್ಯಕ್ತಿತ್ವ.

ಇವೆಲ್ಲಕ್ಕೂ ಮಿಗಿಲಾಗಿ **ವದನಂ ಮಧುರಂ ಅಧರಂ ಮಧುರಂ** ಎಂಬಂತೆ, ಅವರ ಮಧುರ ವಚನ, ಆಕರ್ಷಣೀಯ ಮಂದಹಾಸ ನಮ್ಮ ಮನಸೆಳೆದು ಅನುಗ್ರಹಿಸುತ್ತದೆ.

ಅವರ ಭಾವಚಿತ್ರದ ಮುಂದೆ ಕುಳಿತು ಅವರ ಮುಖಕಮಲವನ್ನೇ ನೋಡುತ್ತಿದ್ದರೆ, ಅವರ ಮುಗುಳುನಗೆ ನಮಗೆ ಸಾವಿರ ಆಧ್ಯಾತ್ಮಿಕ ವಿಚಾರಗಳನ್ನು ಹೇಳುತ್ತದೆ:

"ನೀನು ನನ್ನವನು, ಈ ಜನ್ಮದಲ್ಲಿ ಮಾತ್ರವಲ್ಲ, ಜನ್ಮಜನ್ಮಾಂತರದಲ್ಲೂ ನೀನು ನನ್ನವನು. ನಾನು ಸದಾಕಾಲ ನಿನ್ನೊಂದಿಗಿರುತ್ತೇನೆ. ನೀನು ಏಕೆ ಚಿಂತಿಸುತ್ತೀ. ದುರ್ಲಭವಾದ ಮಾನವಜನ್ಮವನ್ನು ಪಡೆದಿರುವ ನೀನು, ಈ ಜನ್ಮದಲ್ಲಿ ಭಗವಂತನನ್ನು ಮಾತ್ರ ಪ್ರೀತಿಸು, ಅವನ ನಾಮ-ಗುಣ ಕೀರ್ತನೆ ಮಾಡು. ಸಾರ್ಥಕ ರೀತಿಯಲ್ಲಿ ಬದುಕಿ, ನನ್ನನ್ನು ಪಡೆ. ನಾನು ನಿನ್ನ ಜನ್ಮಜನ್ಮಾಂತರದ ಬಂಧು. ನನ್ನನ್ನು ಗಟ್ಟಿಯಾಗಿ ಹಿಡಿದುಕೋ. ನಾನು ನಿನ್ನನ್ನು ಎಲ್ಲಿಗೆ ಬೇಕೋ ಅಲ್ಲಿಗೆ ಎತ್ತಿಕೊಂಡು ಹೋಗುತ್ತೇನೆ. ಭಯ ಪಡಬೇಡ" ಎಂದು ಆ ಕಿರುನಗೆ ನಮಗೆ ತಿಳಿಸುತ್ತದೆ.

ಅವರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ವಿಜ್ಞಾನಾನಂದರು, ತಮ್ಮ ಅನುಭವವನ್ನು ನಮ್ಮೊಂದಿಗೆ ಹೀಗೆ



ಹಂಚಿಕೊಳ್ಳುತ್ತಾರೆ: "ಗುರುದೇವರು ಹೊರನೋಟಕ್ಕೆ ನಮ್ಮ ನಿಮ್ಮ ಹಾಗೆ ಕಾಣಿಸಿಕೊಂಡರೂ, ದೈವಿಕತೆಯನ್ನು ಹೊರಸೂಸುವ ಅವರ ನಗುವನ್ನು ಮಾತ್ರ ನಾನು ಬೇರೆಲ್ಲೂ ನೋಡಿಲ್ಲ. ಅವರು ನಗುವಾಗ ಅವರ ಮುಖಕಮಲದಿಂದಲ್ಲದೆ, ಅವರ ಇಡೀ ದೇಹದಿಂದ ಆನಂದದ ತರಂಗಗಳು ಸುತ್ತ ಪಸರಿಸುತ್ತಿದ್ದವು. ಆ ಮನಮೋಹಕ ನಗುವಿನಲ್ಲಿ ಭಕ್ತ ಜನ ತಮ್ಮನ್ನು ತಾವು ಮರೆಯುತ್ತಿದ್ದರು.

"ಅವರ ಮಧುರ ಕಂಠದಿಂದ ಹೊರಹೊಮ್ಮುವ ಜೇನ್ನುಡಿಗಳು ನಮ್ಮ ಹೃದಯಗಳನ್ನು ತುಂಬಿ ನಮ್ಮನ್ನು ಆನಂದಾತಿರೇಕಕ್ಕೆ ಕೊಂಡೊಯ್ಯುತ್ತಿದ್ದವು. ಅವರ ಕಮಲನಯನಗಳ ಕಾಂತಿ! ಅದು ನೋಡುವವರ ಅಂತರಾಳವನ್ನೇ ಅಳೆಯುವಂತಿದ್ದವು."

ಶ್ರೀರಾಮಕೃಷ್ಣರದು ದಿವ್ಯ ವ್ಯಕ್ತಿತ್ವ. ಹೀಗಾಗಿ ಅವರಿಗೆ ಸಂಬಂಧಪಟ್ಟುದೆಲ್ಲವೂ ದಿವ್ಯವಾದುದೇ ಆಗಿರುತ್ತದೆ. ಶ್ರೀರಾಮಕೃಷ್ಣರ ದಿವ್ಯ ಮಂದಹಾಸವು ಅವರ ಜೀವಿತಕಾಲದಲ್ಲಿ ನೂರಾರು ಜನರನ್ನು ಆಕರ್ಷಿಸಿತು. ಈಗಲೂ ಸಾವಿರಾರು ಜನರನ್ನು ಅವರತ್ತ ಬರಸೆಳೆಯುತ್ತಿದೆ. ಈ ನಗುವಿನ ಒಳನೋಟವನ್ನು ಸರಳವಾಗಿ ನಮಗೆ ಪರಿಚಯಿಸಿರುವ ಪೂಜ್ಯ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಪ್ರಸಿದ್ಧ ಬರಹಗಾರರಾದ ಅವರು ಉತ್ತಮ ವಾಗ್ಮಿಗಳು ಕೂಡ.

ನಿಜ! ಭಗವದ್ಭಾವದಲ್ಲಿ ಮತ್ತೇರಿದ ಆ ನಯನಗಳು! ನೋಡುತ್ತಿರುವಂತೆಯೇ ನಮ್ಮೊಳಗಿನ ಆನಂದದ ಬುಗ್ಗೆ ತೆರೆದುಕೊಳ್ಳುತ್ತದೆ. ನಮ್ಮನ್ನೇ ದಿಟ್ಟಿಸಿ ನೋಡುವ ಆ ನಯನಗಳು, ನಮ್ಮೊಳಗೆ ಹೊಕ್ಕು, ನಮ್ಮ ಅಂತರಾಳದಲ್ಲಿನ ಕುಸಂಸ್ಕಾರಗಳನ್ನು ನಾಶಮಾಡುತ್ತವೆ.

ಆದಕಾರಣವೇ ಸ್ವಾಮಿ ವಿವೇಕಾನಂದರು, ತಾವು ರಚಿಸಿರುವ ಆರಾತ್ರಿಕಗಾನದಲ್ಲಿ, **"ಜ್ಞಾನಾಂಜನ – ವಿಮಲನಯನ ವೀಕ್ಷಣೇ ಮೋಹ ಜಾಯ್"** ಎಂದು ಸುಂದರವಾಗಿ ವರ್ಣಿಸಿದ್ದಾರೆ. ಶ್ರೀರಾಮಕೃಷ್ಣರು ಜ್ಞಾನವೆಂಬ ಅಂಜನ ಹಚ್ಚಿದ ತಮ್ಮ ನಯನಗಳಿಂದ ನಮ್ಮನ್ನು ಒಮ್ಮೆ ವೀಕ್ಷಿಸಿದರೆ ಸಾಕು, ನಮ್ಮೊಳಗಿನ ಅರಿಷಡ್ವರ್ಗಗಳು ಓಡಿ ಹೋಗುತ್ತವೆ.

"ಏಕಾಗ್ರಚಿತ್ತದಿಂದ ನನ್ನನ್ನು ಧ್ಯಾನಿಸಿದ್ದೇ ಆದರೆ, ಎಲ್ಲವನ್ನೂ ಪಡೆಯಬಹುದು" ಎಂದು ಗುರುದೇವರು ಅಂದು ತಮ್ಮ ಭಕ್ತರಿಗೆ ಭರವಸೆಯ ಮಾತುಗಳನ್ನು ಹೇಳಿದರು. ಈ ಆಶ್ವಾಸನೆಯೇ, ಅವರ ಮಂದಹಾಸದ ಮೂಲಕ ಇಂದಿಗೂ ನಮಗೆ ದೊರಕುತ್ತಿದೆ. ಅವರ ಈ ಮಂದಹಾಸವನ್ನೇ ನಮ್ಮ ಹೃದಯದಲ್ಲಿ ಧ್ಯಾನಿಸುವುದರ ಮೂಲಕ, ನಮ್ಮ ಹೃದಯವು ಪರಿಶುದ್ಧವಾಗುತ್ತದೆ. ಹೀಗೆ ಪರಿಶುದ್ಧವಾದ ಮನಸ್ಸು ಆಧ್ಯಾತ್ಮಿಕ ಸೂಕ್ಷ್ಮಗಳನ್ನು, ಸತ್ಯ ವಿಚಾರಗಳನ್ನು ಅರಿಯಲು ಸಮರ್ಥವಾಗುತ್ತದೆ. ಎಲ್ಲರ ಹೃದಯವನ್ನು ಆಕರ್ಷಿಸಿ, ಆನಂದ ವಾರಿಯಲ್ಲಿ ತೋಯಿಸುವ ಆ ಭುವನಮೋಹಕ ಮುಗುಳ್ನಗೆ, ನಮ್ಮ ಹೃನ್ಮನಗಳನ್ನು ಸಂಪೂರ್ಣವಾಗಿ ಆವರಿಸಲಿ. •

## ಕನ್ನಡ ಸಾಹಿತ್ಯದಲ್ಲಿ ಶ್ರೀರಾಮಕೃಷ್ಣರು

**(ಸುಮಾರು ಒಂದು ನೂರು ವರ್ಷಗಳಿಂದ, ಕನ್ನಡ ಭಾಷೆಯಲ್ಲಿ ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯವು ಪ್ರಕಟವಾಗುತ್ತಲಿದೆ. ಅದರಲ್ಲಿನ ಕೆಲವು ಮುಕ್ತಾವಳಿಗಳನ್ನು, ವಿವೇಕಪ್ರಭದಲ್ಲಿ ಪ್ರತಿ ತಿಂಗಳೂ ಮುಂದಿನ ಒಂದು ವರ್ಷಕಾಲ ಪ್ರಕಟಿಸಲಾಗುವುದು. ಶ್ರೀರಾಮಕೃಷ್ಣರ ೧೭೫ ನೇ ಜನ್ಮಜಯಂತಿ ಮಹೋತ್ಸವದ ಪ್ರಯುಕ್ತ, ಚಾರಿತ್ರಿಕವಾಗಿ ಮಹತ್ವವುಳ್ಳ ಈ ಲೇಖನಮಾಲೆಯನ್ನು ಆರಂಭಿಸಲಾಗಿದೆ.)**

"ರಾಮಕೃಷ್ಣ ಪರಮಹಂಸರ ಸೂಕ್ತಿಮುಕ್ತಾವಳಿ" – ಈ ಮುಕ್ತಾವಳಿಯೊಳಗೆ ಪ್ರತಿಯೊಂದು ಸೂಕ್ತಿಮುಕ್ತಾಫಲವನ್ನೂ ನಾನು ಯಥಾಮತಿ ಸಂಭಾವಿಸಿದ್ದೇನೆ. ಇವುಗಳಲ್ಲಿ ಯಾವುದೊಂದೂ ಯಾವ ಜಾತಿಕುಲವರ್ಣಾಶ್ರಮ ಧರ್ಮ ಕರ್ಮಗಳಿಗೂ ಲೇಶವಾದರೂ ಬಾಧಕವಾಗಿಲ್ಲ. ಸದ್ವೃತ್ತ ಮುಕ್ತಾಫಲ ಲಾಭಾನಂದದ ಯೋಚನೆಯನ್ನು ಬಿಟ್ಟು, ಮುತ್ತಿನ ಚಿಪ್ಪಿಗಾಗಿ ವಿವದಿಸುತಲಿರುವ ನಮ್ಮವರ ಮುಷ್ಕರವನ್ನು ಬಿಡಿಸಬೇಕೆಂಬುದೇ ಈ ಮುಕ್ತಾಹಾರ ಸಂಪಾದಕರ ಮುಖ್ಯೋದ್ದೇಶವೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ...ಯಾರಿದನ್ನು ಗಳಿಸಿದರೂ ಶ್ರದ್ಧಾಭಕ್ತಿವಿರಕ್ತಿಗಳೆಂಬ ತಮ್ಮ ಸ್ವಂತವಾದ ಮೂರು ಆಣಿಮುತ್ತುಗಳನ್ನು ಇದರಲ್ಲಿ ಪೋಣಿಸಿದರೇನೇ ಆಗ ಇದು ಅವರಿಗೆ ಪೂರ್ಣಹಾರವೆನಿಸಿ ಪೂರ್ಣಾನಂದವನ್ನುಂಟುಮಾಡುತ್ತದೆ.

– **ದೊಡ್ಡಬೆಲೆ ನಾರಾಯಣಶಾಸ್ತ್ರೀ** ('ಶ್ರೀರಾಮಕೃಷ್ಣ ಪರಮಹಂಸರ ಉಪದೇಶ ವಾಕ್ಯಾವಳಿ'ಗೆ ಬರೆದ ಪೀಠಿಕೆಯಿಂದ)

ಈ ಸಣ್ಣ ಪುಸ್ತಕದಲ್ಲಿ ಅಡಗಿರುವ ಅಮೂಲ್ಯವಾದ ಉಪದೇಶಗಳು ಯಾರ ವದನಾರವಿಂದದಿಂದ ಅಮೃತಧಾರೆಯಂತೆ ಹೊರಟವೋ, ಆ ಮಹಾಪುರುಷರಾದ ಶ್ರೀರಾಮಕೃಷ್ಣ ಪರಮಹಂಸರ ಪರಮಪಾವನವಾದ ಜೀವನ ಚರಿತೆಯು ಅತ್ಯದ್ಭುತವಾಗಿಯೂ ಅತಿಮಾನುಷವಾಗಿಯೂ ಇರುವುದು. ಅವರ ಶಿಷ್ಯವರ್ಯರಾಗಿ, ಹಿಂದೂ ಮತದ ಶ್ರೇಷ್ಠತ್ವವನ್ನೂ, ಆದುದರಿಂದಲೇ ವೇದಾಂತವು ಲೋಕಸಮ್ಮತವಾದುದೆಂಬುದನ್ನೂ, ಅಮೆರಿಕ, ಇಂಗ್ಲೆಂಡ್ ಮುಂತಾದ ವಿದೇಶಗಳಲ್ಲಿ ಘಂಟಾಘೋಷದಿಂದ ಸಾರಿ, ಭಾರತವರ್ಷಕ್ಕೂ ಭಾರತೀಯರಿಗೂ ಖ್ಯಾತಿಯನ್ನು ಸಂಪಾದಿಸಿದ ಶ್ರೀ ವಿವೇಕಾನಂದ ಸ್ವಾಮಿಗಳು ತಮ್ಮ ಗುರುಗಳ ಜೀವನ ಚರಿತೆಯನ್ನು ಕುರಿತು, 'ಅದು (ಚರಿತೆಯು) ವೇದಕ್ಕೆ ಜೀವಕಳೆಯನ್ನು ತುಂಬಿದ ವ್ಯಾಖ್ಯಾನವು' ಎಂದು ಅಪ್ಪಣೆ ಕೊಟ್ಟಿರುವರು.

ವೇದಾಂತ ಸಾರವೇ ಪರಮಹಂಸರ ಉಪದೇಶಗಳಲ್ಲಿ ಬೆಳಗುತ್ತಿರುವುದು. ಅವುಗಳನ್ನು ಸಕಲರೂ ಪಠಿಸಿ, ತತ್ವವನ್ನರಿದು, ಕೃತಾರ್ಥರಾಗಬೇಕೆಂಬುದೇ ನನ್ನ ಆಶಯ. ಮಹಮ್ಮದೀಯನಾಗಲಿ, ಕ್ರೈಸ್ತಮತಾವಲಂಬಿಯಾಗಲಿ, ಮತ್ತೆ ಇನ್ನಾವ ಮತಪ್ರವಿಷ್ಟನಾಗಲಿ, ಯಾರು ಪರಮಹಂಸರ ಉಪದೇಶಗಳನ್ನು ಓದಿ ಮನನ ಮಾಡಿದರೂ ಸರಿಯೇ, ಅವರ ಅರಿವಿಗೆ **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** ಎಂದರೆ, ಇರುವುದು ಒಂದೇ ಆದರೂ, ಅದನ್ನು ಪ್ರಾಜ್ಞರು ನಾನಾ ವಿಧವಾಗಿ ಕರೆಯುವರು, ಎಂಬ ಮಹಾವೇದವಾಕ್ಯದ ರಹಸ್ಯವು ಯಥಾವತ್ತಾಗಿ ಬಾರದೇ ಇರದು. ಏತಕ್ಕೆಂದರೆ, ಪರಮಹಂಸರ ಉಪದೇಶಗಳೆಲ್ಲವೂ ಸರ್ವಸಮ್ಮತವಾದುವು. ಆ ಮಹರ್ಷಿಗಳು ಸಕಲ ಮತಗಳ ತತ್ವವನ್ನೂ ತಿಳಿದು, ಬ್ರಹ್ಮಸಾಗರದಲ್ಲಿ ಮುಳುಗಿ ಮೇಲೆದ್ದು, ನಾಮಮಾತ್ರದಿಂದ ಭಿನ್ನಭಿನ್ನಗಳಾಗಿ ತೋರುವ ಮತಗಳ ಪರಸ್ಪರ ವಿರೋಧವನ್ನು ಪರಿಹರಿಸುವುದಕ್ಕಾಗಿಯೇ, ಎಲ್ಲಿ ಭಿನ್ನ ಮತಗಳು ನೆಲೆಗೊಂಡು ಒಂದಕ್ಕೊಂದು ಕಾದಾಡುತ್ತಲಿರುವುವೋ, ಆ ನಮ್ಮ ಆರ್ಯಾವರ್ತವೆಂಬ ಪುಣ್ಯಭೂಮಿಯಲ್ಲಿ ಅವತಾರವನ್ನೆತ್ತಿದರು.

–**ನಂಗಪುರಂ ವೆಂಕಟೇಶಯ್ಯಂಗಾರ್,** ಬೆಂಗಳೂರು, ೨೧.೧.೧೯೧೬

('ಶ್ರೀರಾಮಕೃಷ್ಣ ಪರಮಹಂಸರ ಉಪದೇಶ ವಾಕ್ಯಾವಳಿ'ಗೆ ಬರೆದ ಪೀಠಿಕೆಯಿಂದ)

# ಶ್ರೀರಾಮಕೃಷ್ಣರ 'ಸಾಧಕಭಾವ'

ಸ್ವಾಮಿ ಶಿವಕಾಂತಾನಂದ

**ಸಾಧನೆಯ ಮಹತ್ವ :** ನವಗೋಪಾಲ ಘೋಷನೆಂಬ ಶ್ರೀರಾಮಕೃಷ್ಣ ಪರಮಹಂಸರ ಗೃಹೀಭಕ್ತನ ಮನೆಗೆ ೧೬.೦೨.೧೮೯೮ರಂದು ಶ್ರೀರಾಮಕೃಷ್ಣರ ಶಿಲಾಮೂರ್ತಿಯ ಪ್ರತಿಷ್ಠಾಪನೆಯನ್ನು ನೆರವೇರಿಸಲು ಸ್ವತಃ ಸ್ವಾಮಿ ವಿವೇಕಾನಂದರೇ ಆಗಮಿಸಿದ್ದಾರೆ. ಸಾವಿರಾರು ಜನ ಅಲ್ಲಿ ಸೇರಿದ್ದಾರೆ. ಆ ಸಮಯದಲ್ಲಿ ಅತ್ಯಂತ ಭಾವಪರವಶರಾಗಿ ಸ್ವಾಮಿ ವಿವೇಕಾನಂದರು ಹೀಗೆ ಉದ್ಗರಿಸಿದರು: **ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ । ಅವತಾರವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥**

ಶ್ರೀರಾಮಕೃಷ್ಣರು ಅವತಾರವರಿಷ್ಠರೆಂದ ಮೇಲೆ ಸಾಮಾನ್ಯ ಸಾಧಕನಂತೆ ಅವರು ೧೨ ವರ್ಷಗಳ ಕಠಿಣ ಸಾಧನೆಯನ್ನು ಮಾಡುವ ಆವಶ್ಯಕತೆಯಾದರೂ ಏನಿತ್ತು ? ಹಿಂದಿನ ಅವತಾರಪುರುಷರಾದ, ಶ್ರೀರಾಮ, ಶ್ರೀಕೃಷ್ಣ, ಭಗವಾನ್ ಬುದ್ಧ, ಏಸುಕ್ರಿಸ್ತ, ಚೈತನ್ಯದೇವ ಮುಂತಾದವರ ಜೀವನದಲ್ಲಿ ಇಷ್ಟೊಂದು ಕಠಿಣ ಮತ್ತು ವಿವಿಧ ಮಾರ್ಗಗಳಲ್ಲಿ ಸಾಧನೆ ಮಾಡಿದ ಪ್ರಸ್ತಾಪ ಬಂದಿಲ್ಲವಲ್ಲ ?

ಶ್ರೀರಾಮಕೃಷ್ಣರ ಜೀವನದ ಮುಖ್ಯವಾದ ಅಂಶವೇ 'ಆಧ್ಯಾತ್ಮಿಕ ಸಾಧನೆ' ಎಂಬುದು. ಶ್ರೀರಾಮಕೃಷ್ಣರ ಈ ಸಾಧನಾ ಭಾಗ ಅತ್ಯಂತ ವಿಶಿಷ್ಟವಾದದ್ದು, ಅಮೋಘವಾದದ್ದು ಮತ್ತು ಅನೇಕ ಉದ್ದೇಶಗಳ ಸಾಫಲ್ಯದಿಂದ ಕೂಡಿದ್ದು. ಶ್ರೀರಾಮಕೃಷ್ಣರ ಅವತಾರಕಾಲದಲ್ಲಿ ಸಾಧನೆಯ ಮೂಲಕವೇ ಸರ್ವಧರ್ಮಸಂಸ್ಥಾಪನೆಯೂ ನಡೆಯಿತು ಎಂಬುದು ಮಹತ್ತರವಾದ ಅಂಶ. ಈ ಆಧುನಿಕ ವಿಜ್ಞಾನಯುಗದಲ್ಲಿ ಯಾವುದೇ ವಿಷಯವನ್ನು ಪ್ರಮಾಣೀಕರಿಸದಿದ್ದಲ್ಲಿ ಅದನ್ನು ಲೋಕವು ಸ್ವೀಕರಿಸುವುದಿಲ್ಲ, ಜನರು ಅನುಸರಿಸುವುದಿಲ್ಲ. ಅದಕ್ಕಾಗಿ ಶ್ರೀರಾಮಕೃಷ್ಣರು ತಮ್ಮ ಸಾಧನಾ ಪ್ರಕ್ರಿಯೆಯನ್ನೇ ಭಗವಂತನ ಅಸ್ತಿತ್ವವನ್ನು ನಿರೂಪಿಸಲು ಬಳಸಿಕೊಂಡರು. ಆ ಮೂಲಕ ಮೇಲ್ನೋಟಕ್ಕೆ ಪರಸ್ಪರ ವಿರುದ್ಧವೆಂದು ತೋರುವ ಧರ್ಮಗಳೂ ಮತ್ತು ಅವುಗಳು ಬೋಧಿಸುವ ಮಾರ್ಗಗಳೂ, ಒಂದೇ ಸತ್ಯಕ್ಕೆ ತೆರೆದುಕೊಂಡ ವಿವಿಧ ಸಾಧನಾಪಥಗಳು ಎಂದು ರುಜುವಾತು ಪಡಿಸಿದರು. ಸನಾತನ ಧರ್ಮದ ಅನೇಕ ಮತಗಳಲ್ಲಿ ಹಾಗೂ ವಿಶ್ವದ ಇತರ ಪ್ರಸಿದ್ಧ ಧರ್ಮಗಳಲ್ಲಿಯೂ ಒಂದೇ ರೀತಿಯ ನಿಷ್ಠೆಯನ್ನು ಹೊಂದಿದ್ದ ಅವರು, ಆ ಮಾರ್ಗಗಳಲ್ಲಿರುವ ಅಮೂಲ್ಯ ರತ್ನಗಳನ್ನು ಹೊರತೆಗೆದು, ಜಗತ್ತಿಗೆಲ್ಲ ಪ್ರಕಟಪಡಿಸಿದರು.



**ಸಾಧನೆಯ ಉದ್ದೇಶ :** ಶ್ರೀರಾಮಕೃಷ್ಣರಲ್ಲಿ ಮಾನವ ಮತ್ತು ದೈವಿಕಭಾವಗಳ ಅಪೂರ್ವ ಸಮ್ಮಿಲನವಿತ್ತು. ಸ್ವಾರ್ಥದ ಲವಲೇಶವೂ ಅವರಲ್ಲಿ ಇರಲಿಲ್ಲ. ಆಧುನಿಕ ಕಾಲದಲ್ಲಿ ಭಗವಂತನ ಸಾಕ್ಷಾತ್ಕಾರ ಮತ್ತು ಮುಕ್ತಿಪಥಗಳಿಗೆ ಪುನಶ್ಚೇತನವನ್ನು ಕೊಟ್ಟು, ಆಧ್ಯಾತ್ಮಿಕಜೀವನಕ್ಕೆ ಸಾಧಕರನ್ನು ಹುರಿದುಂಬಿಸುವುದು ಅವರ ಸಾಧನೆಯ ಗುರಿಯಾಗಿತ್ತು. ಮನುಷ್ಯಶರೀರವನ್ನು ಧರಿಸಿ ಪ್ರಪಂಚದ ಸುಖದುಃಖಗಳನ್ನು ಅನುಭವಿಸಿ, ತಪಸ್ಸು ಮತ್ತು ಸಾಧನೆಗಳ ಮೂಲಕ ಅವರು ಪೂರ್ಣತ್ವವನ್ನು ಪಡೆದರು.

**ಶ್ರೀರಾಮಕೃಷ್ಣರ ಸಾಧನಾಗಾಥೆಯೆಂಬುದು ಜಗತ್ತಿನ ಆಧ್ಯಾತ್ಮಿಕ ರಂಗದಲ್ಲಿಯೇ ಒಂದು ಅದ್ಭುತವಾದ ವೃತ್ತಾಂತ. ಹನ್ನೆರಡು ವರ್ಷಗಳ ಕಾಲ ಅವರು ವಿವಿಧ ಸಾಧನೆಗಳಲ್ಲಿ ತೊಡಗಿ, ಪ್ರಚಂಡ ಆಧ್ಯಾತ್ಮಿಕ ಶಕ್ತಿಯ ಆಗರವಾದರು; ಸರ್ವಧರ್ಮ ಸಮಾನತೆಯನ್ನು ಅಧಿಕೃತವಾಗಿ ಸಾಧಿಸಿ, ಬೋಧಿಸಿದ ಹರಿಕಾರರೂ ಆದರು. ಈ ರೋಚಕ ಕಥನವನ್ನು ವಿದ್ವತ್‍ಪೂರ್ಣವಾಗಿ ಪರಿಚಯಿಸಿರುವ ಸ್ವಾಮೀಜಿಯವರು ಕೊಡಗಿನ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಲೇಖಕರು ಹಾಗೂ ಭಾಷಣಕಾರರು.**

ಉಳಿದ ಅವತಾರಗಳ ಜೀವನವೃತ್ತಾಂತದಲ್ಲಿ ಅವರೆಲ್ಲರೂ ಬಾಲ್ಯದಿಂದಲೇ ಅಸಾಧಾರಣ ಅಲೌಕಿಕ ಶಕ್ತಿಯನ್ನು ಹೊಂದಿದ್ದವರೆಂದೂ, ಅತಿಮಾನುಷ ಕಾರ್ಯಗಳನ್ನು ಶೈಶವಾವಸ್ಥೆಯಿಂದಲೇ ಮಾಡಿದ್ದರೆಂದೂ, ದಿವ್ಯ ದರ್ಶನಗಳನ್ನು ಸಹ ನೀಡುತ್ತಿದ್ದರೆಂದು ಅವರ ಜೀವನವೃತ್ತಾಂತಗಳಿಂದ ತಿಳಿಯುತ್ತೇವೆ. ಆದರೆ, ಮನುಜಸಹಜವಾದ ನಿತ್ಯದಿನಚರಿಯ ಪ್ರಸ್ತಾಪವೇ ಅವುಗಳಲ್ಲಿ ಕಂಡುಬರುವುದಿಲ್ಲ. ಆ ಅವತಾರಪುರುಷರು ಸಾಧಕರಾಗಿ ಹೇಗೆ ನಡೆದುಕೊಂಡರು? ಅವರು ಅನುಭವಿಸಿದ ಮಾರ್ಗದಲ್ಲಿ ಎದುರಾದ ಕಂಟಕಗಳು, ಪ್ರಲೋಭನೆಗಳನ್ನು ಅವರು ಹೇಗೆ ಮೆಟ್ಟಿ ನಿಂತರು? ಇವೆಲ್ಲಾ ಆ ವೃತ್ತಾಂತಗಳಲ್ಲಿ ಕಾಣಸಿಗುವುದಿಲ್ಲ. ಅವರ ಅನುಯಾಯಿಗಳು ತಮ್ಮ ಇಷ್ಟದೇವತೆಯನ್ನು ಅಲೌಕಿಕವೆಂಬಂತೆಯೇ ಚಿತ್ರಿಸಿದ್ದಾರೆ. ಸಾಮಾನ್ಯ ಸಾಧಕನಂತೆ ಮಾಯಾಧೀಶ್ವರನು ಮಾಯೆಯೊಡನೆ ಸೆಣಸುವುದು ಆ ಭಕ್ತರಿಗೆ ರುಚಿಸದು. ಆದರೆ ಶ್ರೀರಾಮಕೃಷ್ಣರ ಜೀವನಚರಿತ್ರೆಯಲ್ಲಿ ನಮಗೆ ಈ ಕೊರತೆ ಇಲ್ಲ. ಅವರ ಜೀವನದ ಎಲ್ಲ ರೀತಿಯ ಘಟನೆಗಳೂ ಅಧಿಕೃತವಾಗಿ ದಾಖಲಾಗಿವೆ. ಅವತಾರಪುರುಷರಾದರೂ ಸಾಧಾರಣ ಸಾಧಕರಂತೆ ನಡೆದು ಈ ಜಗತ್ತಿಗೆ ಅವರು ಒಂದು ಆದರ್ಶವಾಗಬೇಕಾಗಿತ್ತು; ಸಾಧನೆಯ ಮಹತ್ವವನ್ನು ಜಗತ್ತಿಗೆ ನಿರೂಪಿಸಬೇಕಾಗಿತ್ತು. ಅದನ್ನು ಅವರು ಯಶಸ್ವಿಯಾಗಿ ಮಾಡಿದರು. ಮಾನವದೇಹ ಧರಿಸಿ, ಎಲ್ಲ ಸಾಧಕರಂತೆ ಹಲವಾರು ಏಳು-ಬೀಳುಗಳು, ಪ್ರಲೋಭನೆಗಳು, ಅಡೆತಡೆ, ಹತಾಶೆ ಮುಂತಾದವುಗಳ ಮೂಲಕ ಹಾಯ್ದು, ಒಬ್ಬ ಆದರ್ಶ ಸಾಧಕನೆಂದರೆ ಹೇಗಿರಬೇಕೆಂಬ ಅಚ್ಚನ್ನು ಶ್ರೀರಾಮಕೃಷ್ಣರು ನಿರ್ಮಾಣ ಮಾಡಿ ಹೋಗಿದ್ದಾರೆ.

**ಕಾಳೀದರ್ಶನ:** ಪಾಶ್ಚಿಮಾತ್ಯ ಶಿಕ್ಷಣ, ನವೀನ ತತ್ತ್ವಗಳು ಮತ್ತು ಆಧುನಿಕತೆಯ ಪ್ರವಾಹದಲ್ಲಿ ಸಿಕ್ಕಿದ ೧೯ ನೆಯ ಶತಮಾನದ ವಂಗ ಸಮಾಜದಲ್ಲಿ, ಮೂರ್ತಿಪೂಜೆ ಎನ್ನುವುದು ಬಹು ನಿಂದೆಗೆ ಗುರಿಯಾಗಿದ್ದ ಸಂಗತಿಯಾಗಿತ್ತು. ಭಾರತೀಯ ಸಾಮಾಜಿಕ ಸುಧಾರಕರು ಕೂಡ ಇದಕ್ಕೆ ಹೊರತಾಗಿರಲಿಲ್ಲ. ಮೂರ್ತಿಪೂಜೆಯ ಮಹತ್ವವನ್ನು ಈ ಜಗತ್ತಿಗೆ ಪರಿಚಯ ಮಾಡಿಕೊಡಲೆಂದೇ, ಶ್ರೀರಾಮಕೃಷ್ಣರು ಪ್ರಪ್ರಥಮವಾಗಿ ಕಾಳೀ ದೇವಸ್ಥಾನದ ಅರ್ಚಕರಾಗಿ, ಆ ಶಿಲಾವಿಗ್ರಹದಲ್ಲಿಯೇ ಜಗನ್ಮಾತೆಯ ದಿವ್ಯದರ್ಶನ ಪಡೆದರು ಎಂದು ಹೇಳಬಹುದು. ಅವರು ಹೇಳುತ್ತಿದ್ದರು, "ತಾಯಿ ಭಗವತಿ ಮೃಣ್ಮಯಿಯಲ್ಲ, ಚಿನ್ಮಯಿ" ಎಂದು. ಅಣ್ಣ ರಾಮಕುಮಾರನು ಹೇಳಿಕೊಟ್ಟ ವಿಧಿವಿಧಾನದ ಪೂಜೆಯಿಂದಲೇ ದಕ್ಷಿಣೇಶ್ವರದ ಕಾಳೀಪೂಜೆಯನ್ನು ಅವರು ಆರಂಭಿಸಿದರು. ಮಂತ್ರದೀಕ್ಷೆಯಿಲ್ಲದೆ ಶಕ್ತಿದೇವತೆಗಳ ಉಪಾಸನೆಯನ್ನು ಕೈಗೊಳ್ಳಬಾರದೆಂಬ ವಿಧಿಯನ್ನು ಮನ್ನಿಸಿ, ಕೇನಾರಾಮ ಭಟ್ಟಾಚಾರ್ಯನೆಂಬ ತಂತ್ರಸಾಧಕನಿಂದ ಕಾಳೀ ಶಕ್ತಿಮಂತ್ರದೀಕ್ಷೆಯನ್ನೂ ಸ್ವೀಕರಿಸಿದರು. ಅವರದು ಅದ್ಭುತ ಸಹನಾಶಕ್ತಿ. ತಂತ್ರಶಾಸ್ತ್ರೋಕ್ತ ಕಾಳೀಪೂಜೆ ಅತ್ಯಂತ ಕಠಿಣ. ಅವರು ತಮ್ಮ ದೈಹಿಕ ಮತ್ತು ಮಾನಸಿಕ ಶ್ರಮವನ್ನೂ ಲೆಕ್ಕಿಸದೆ, ದಿನದ ಪೂಜೆಯ ನಂತರ ಇಡೀ ರಾತ್ರಿ ಆಮಲಕ ಅಥವಾ ಬಿಲ್ವ ಮರದ ಕೆಳಗೆ ಸಾಧನೆಗೆ ಕುಳಿತುಕೊಳ್ಳುತ್ತಿದ್ದರು.

ಶ್ರೀರಾಮಕೃಷ್ಣ ಪರಮಹಂಸರ ಕಾಳೀಪೂಜೆಯೊಂದಿಗೆ ಸನಾತನ ಧರ್ಮದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಒಂದು ಅಧ್ಯಾಯ ಆರಂಭವಾಯಿತು ಎಂದು ಹೇಳಬಹುದು. ಪ್ರತಿದಿನ ತಾವೇ ಹೂವನ್ನು ಕೊಯ್ದು, ಮಾಲೆಯನ್ನು ತಯಾರಿಸಿ, ಜಗನ್ಮಾತೆಗೆ ಸೀರೆಯನ್ನು ಉಡಿಸಿ, ವಿಧಿವತ್ತಾದ ಪೂಜೆಯನ್ನು, ನೈವೇದ್ಯವನ್ನು ಸಲ್ಲಿಸುತ್ತಿದ್ದರು. ರಾಮಪ್ರಸಾದ, ಕಮಲಾಕಾಂತ ಮುಂತಾದವರ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ತನ್ಮಯರಾಗಿ ಹಾಡುತ್ತಾ ಭಾವಪರವಶರಾಗುತ್ತಿದ್ದರು. ಅವರ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿದು ಅವರ ದೇಹವೆಲ್ಲ ಒದ್ದೆಯಾಗುತ್ತಿತ್ತು. ಅವರ ಇಡೀ ಪೂಜೆಯು ಭಕ್ತಿ, ಶ್ರದ್ಧೆ ಮತ್ತು ವ್ಯಾಕುಲತೆಗಳ ಅಪೂರ್ವ ಸಮ್ಮಿಲನವಾಗಿತ್ತು. ಬಾಹ್ಯ ಜಗತ್ತು ಅವರಿಗೆ ಶೂನ್ಯವಾಯಿತು. ಜನ, ಸಮಾಜವೇನೆಂದುಕೊಳ್ಳುತ್ತಿದೆಯೆಂಬ ಪರಿವೆಯೇ ಅವರಿಗೆ ಇರಲಿಲ್ಲ. ಜನರು ಅವರಿಗೆ ಹುಚ್ಚನೆಂಬ ಪಟ್ಟ ಕಟ್ಟಿದರೂ ಅವರು ಎದೆಗುಂದಲಿಲ್ಲ. ವಿಪರೀತ ವ್ಯಾಕುಲತೆಯಿಂದ ಮತ್ತು ಮಾತೆಯ ದರ್ಶನವಾಗಲಿಲ್ಲವೆಂಬ ತೀವ್ರ ವೇದನೆಯಿಂದ ಅವರ ನಿದ್ರಾಹಾರಗಳು ಕಡಮೆಯಾದವು. ಅವರ ಎದೆಯ ಪ್ರದೇಶವು ಕೆಂಪಾಗಿ, ಕಣ್ಣುಗಳು ಕಂಬನಿಯ ಭಾರದಿಂದ ಕುಂದಿಹೋಗಿತ್ತು. "ತಾಯಿಯ ದರ್ಶನವಾಗಲಿಲ್ಲವಲ್ಲ" ಎಂದು ಅವರು ನೆಲಕ್ಕೆ ಮುಖವನ್ನು ಉಜ್ಜಿಕೊಳ್ಳುತ್ತಿದ್ದರು, ರೋದಿಸುತ್ತ ನೆಲದ ಮೇಲೆ ಹೊರಳಾಡುತ್ತಿದ್ದರು. ಕೊನೆಗೊಮ್ಮೆ ಗರ್ಭಗೃಹದಲ್ಲಿ ಇಂಥ ತೀವ್ರಭಾವದಲ್ಲಿ ವಿಹ್ವಲರಾಗಿದ್ದಾಗ, ವಿರಹ ತಾಳದೆ ಗೋಡೆಗೆ ತೂಗಿಹಾಕಿದ್ದ ಬಲಿಖಡ್ಗವನ್ನು ಓಡಿಹೋಗಿ ತೆಗೆದುಕೊಂಡು, ಜೀವ ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ ಜಗನ್ಮಾತೆಯು ತನ್ನ ಸುಪುತ್ರನ ಮೇಲೆ ಪ್ರಸನ್ನಳಾದಳು. ದಿವ್ಯಜ್ಯೋತಿಸ್ವರೂಪಿಣಿ ತಾಯಿಯ ಅದ್ಭುತದರ್ಶನದಿಂದ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು.

ಇದಾದ ನಂತರ ಶ್ರೀರಾಮಕೃಷ್ಣರು ತಮ್ಮ ಜೀವನದುದ್ದಕ್ಕೂ ಜಗನ್ಮಾತೆಯೊಡನೆ ಸದಾ ಸರ್ವದಾ ಸುಮಧುರ ಸಂಬಂಧವನ್ನು ಹೊಂದಿದ್ದರು. ಅವರ ವೈದೀಭಕ್ತಿಯು ರಾಗಾತ್ಮಿಕಾ ಭಕ್ತಿಯಾಗಿ ಪರಿಪಕ್ವವಾಯಿತು. "ತಾಯಿ, ಶರಣಾಗತನಾದ ಬಾಲಕನು ಏನು ಹೇಳಬೇಕೊ, ಏನು ಮಾಡಬೇಕೊ ಅದೆಲ್ಲವನ್ನೂ ಮಾಡಿಸು" ಎಂಬ ಸಂಪೂರ್ಣ ಶರಣಾಗತ ಭಾವದಲ್ಲಿಯೇ ಅವರು ಮುಂದಿನ ಜೀವನವನ್ನೆಲ್ಲ ಕಳೆದರು. ಈಗ ಅವರಿಗೆ ಧ್ಯೇಯವಸ್ತುವಿನಲ್ಲಿ ಮನಸ್ಸನ್ನು